**ಮಾನ್ಯ ವಿಧಾನ ಪರಿಷತ್ ಸದಸ್ಯರಾದ ಡಾ.ಉಮಾಶ್ರೀ ಇವರು ಪ್ರಸ್ತಾಪಿಸಿರುವ ನಿಯಮ 72ರ ಅಡಿಯಲ್ಲಿ ನೀಡಿರುವ ಸೂಚನೆಗೆ ಉತ್ತರ**

**ಪ್ರಶ್ನೆ:**

ಶಾಲೆ ಮಕ್ಕಳು ಗುಣಮಟ್ಟದ ಆಹಾರ ಸೇವಿಸಬೇಕು ಎಂಬ ಉತ್ತಮ ಉದ್ದೇಶದಿಂದ ಅಜೀಂ ಪ್ರೇಮ್‌ಜೀ ಫೌಂಡೇಷನ್ ನೀಡಿದ್ದ ಕೊಡುಗೆ ಅನ್ವಯ ಶಾಲಾ ಮಕ್ಕಳಿಗೆ ಮೊಟ್ಟೆ ಪೂರೈಕೆ ಆಗುತ್ತಿಲ್ಲ. ಈ ವಿಷಯ ಅಜೀಂ ಪ್ರೇಮ್‌ಜೀ ಫೌಂಡೇಷನ್ ನಡೆಸಿದ ರಿಯಾಲಿಟಿ ಚೆಕ್‌ನಲ್ಲಿ ಬೆಳಕಿಗೆ ಬಂದಿದೆ. ಈ ಸಂಬಂಧ ಫೌಂಡೇಷನ್ ಸರಕಾರಕ್ಕೆ ವರದಿ ಸಲ್ಲಿಸಿದೆ. ವರದಿಯಲ್ಲಿ 367 ಶಾಲೆಗಳ ಪೈಕಿ 66 ಶಾಲೆಗಳಲ್ಲಿ ಪೂರಕ ಪೌಷ್ಟಿಕ ಆಹಾರವಾಗಿ ವಿತರಿಸಬೇಕಾಗಿದ್ದ ಮೊಟ್ಟೆಯನ್ನು ಇದುವರೆಗೂ ವಿರತರಿಸಿರುವುದಿಲ್ಲ. ಶಾಲೆಯ ಶೇ.30 ರಷ್ಟು ಮಕ್ಕಳು ಮೊಟ್ಟೆ ಸೇವನೆಗೆ ಒಪ್ಪಿಗೆ ನೀಡಿದರೂ, ಮೊಟ್ಟೆಕೊಡದೆ ಶೇಂಗಾ ಚಿಕ್ಕಿ/ಬಾಳೆಹಣ್ಣು ವಿತರಿಸಿರುವುದು, ಮೊಟ್ಟೆ ಸ್ವೀಕರಿಸದ ವಿದ್ಯಾರ್ಥಿಗಳಿಗೆ ಮೊದಲ ಆದ್ಯತೆಯಾಗಿ ಬಾಳಹಣ್ಣು ನೀಡಬೇಕು. ಆದರೆ ಹಾಗೆ ಮಾಡದೆ ಶೇಂಗಾ ಚಿಕ್ಕಿ ನೀಡಿರುತ್ತಾರೆ. ವಿದ್ಯಾರ್ಥಿಗಳಿಗೆ ನೀಡುತ್ತಿರುವ ಚಿಕ್ಕಿಯ ತೂಕ ನಿಗದಿಗಿಂತಲೂ ಕಡಿಮೆ ಇರುವುದು ಕಂಡುಬಂದಿರುತ್ತದೆ. ಈ ವಿಷಯವು ಮಕ್ಕಳ ಹಿತದೃಷ್ಟಿಯಿಂದ ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರ ಗಮನಸೆಳೆಯುತ್ತೇನೆ.

**ಉತ್ತರ:**

ರಾಜ್ಯದ ಎಲ್ಲಾ ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢ, ಅನುದಾನಿತ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳಲ್ಲಿ ಮತ್ತು ಕರ್ನಾಟಕ ಪಬ್ಲಿಕ್ ಶಾಲೆಗಳ ಪೂರ್ವ ಪ್ರಾಥಮಿಕ ತರಗತಿಗಳಲ್ಲಿ ವ್ಯಾಸಂಗ ಮಾಡುತ್ತಿರುವ ಮಕ್ಕಳಿಗೆ ವಾರದಲ್ಲಿ 6 ದಿನಗಳಿಗೆ ಪೂರಕ ಪೌಷ್ಟಿಕ ಆಹಾರವಾಗಿ ಮೊಟ್ಟೆ, ಮೊಟ್ಟೆ ಸೇವಿಸದ ವಿದ್ಯಾರ್ಥಿಗಳಿಗೆ ಬಾಳೆಹಣ್ಣು/ಶೇಂಗಾ ಚಿಕ್ಕಿಯನ್ನು ವಿತರಿಸುವ ಕಾರ್ಯಕ್ರಮ ಅನುಷ್ಠಾನಗೊಂಡಿರುತ್ತದೆ. ಸರ್ಕಾರ ನೀಡುವ ವಾರದಲ್ಲಿನ 2 ದಿನಗಳೂ ಸೇರಿ ಅಜೀಂ ಪ್ರೇಮ್‌ಜೀ ಫೌಂಡೇಷನ್ ಸಂಸ್ಥೆಯು ತನ್ನ ಆರ್ಥಿಕ ನೆರವಿನಿಂದ ಉಳಿದ 4 ದಿನಗಳಿಗೆ ಪೂರಕ ಪೌಷ್ಟಿಕ ಆಹಾರವನ್ನು ವಿತರಿಸಲು ಸರ್ಕಾರದೊಂದಿಗೆ MOU ಮೂಲಕ ಕೈಜೋಡಿಸಿದ್ದು, ಅದರಂತೆ ಅನುಷ್ಠಾನಗೊಳಿಸಲಾಗಿದೆ.

ಈ ನಡುವೆ ಸದರಿ ಸಂಸ್ಥೆಯ ಪರಿಶೀಲನಾ ತಂಡವು ಕಾರ್ಯಕ್ರಮ ಅನುಷ್ಠಾನ ಪ್ರಗತಿ ಕುರಿತಂತೆ ರಾಜ್ಯದಲ್ಲಿ ಮೊದಲ ಸುತ್ತಿನಲ್ಲಿ ಅಕ್ಟೋಬರ್ 2024ರ ಮಾಹೆಯಲ್ಲಿ Random ಆಗಿ ಇಲಾಖೆಯ ಅನುಮತಿ ಪಡೆದು 367 ಶಾಲೆಗಳಿಗೆ ಆಕಸ್ಮಿಕ ಭೇಟಿ ನೀಡಿ ಪರಿಶೀಲಿಸಿ ಮಾಹಿತಿ ಪಡೆದಿರುತ್ತಾರೆ. ಇವರ ವರದಿಯಂತೆ 66 ಶಾಲೆಗಳಲ್ಲಿ ಪೂರಕ ಪೌಷ್ಟಿಕ ಆಹಾರವಾಗಿ ವಿತರಿಸಬೇಕಿದ್ದ ಮೊಟ್ಟೆಯನ್ನು ನೀಡಿರುವುದಿಲ್ಲ. ಶೇ. 30 ರಷ್ಟು ಮಕ್ಕಳು ಮೊಟ್ಟೆ ಸೇವನೆಗೆ ಒಪ್ಪಿಗೆ ನೀಡಿದ್ದರೂ ಕೂಡ ಮೊಟ್ಟೆ ಕೊಡದೆ ಶೇಂಗಾ ಚಿಕ್ಕಿಯನ್ನು ವಿತರಿಸಿದ್ದು, ಶೇಂಗ ಚಿಕ್ಕಿಯ ತೂಕ ಕಡಿಮೆ ಇರುವುದು ಕಂಡು ಬಂದಿರುತ್ತದೆ ಎಂಬುದಾಗಿ ವರದಿಯನ್ನು ಇಲಾಖೆಯು ಪಡೆದಿರುತ್ತದೆ. ಈ ಸಂಬಂಧ ಇಲಾಖೆಯು ಈ ನ್ಯೂನ್ಯತೆಗಳನ್ನು ಗಂಭೀರವಾಗಿ ಪರಿಗಣಿಸಿ ಈ ಕೆಳಕಂಡ ಕ್ರಮಗಳನ್ನು ಕೈಗೊಂಡು ಕಾರ್ಯಕ್ರಮದ ಅನುಷ್ಠಾನವನ್ನು ಉತ್ತಮಗೊಳಿಸಿದೆ.

**ಶಾಲಾ ಶಿಕ್ಷಣ ಇಲಾಖೆ ತೆಗೆದುಕೊಂಡ ಕ್ರಮಗಳು.**

1. ದಿನಾಂಕ 30.10.2024 ರಂದು ಆಯುಕ್ತರು, ಶಾಲಾ ಶಿಕ್ಷಣ ಇಲಾಖೆ ಬೆಂಗಳೂರು ಇವರಿಂದ ಜ್ಞಾಪನ ಪತ್ರ ಜಾರಿಗೊಳಿಸಿದ್ದು ಶೇಂಗಾ ಚಿಕ್ಕಿಯ ಅಳತೆ ಪ್ರಮಾಣ ಸ್ಪಷ್ಟವಾಗಿ ನಿಗದಿಪಡಿಸಿದೆ. ಶೇಂಗಾ ಚಿಕ್ಕಿಯ ಉದ್ದ 2 ಇಂಚು ಅಗಲ 2 ಇಂಚು ಮತ್ತು ದಪ್ಪ ½ ಇಂಚು ಒಟ್ಟು ತೂಕ 35 ರಿಂದ 40 ಗ್ರಾಂ ಇರಬೇಕು ಎಂಬುದಾಗಿ ಸೂಚಿಸಿದೆ. **ಪ್ರತಿಯನ್ನು ಅನುಬಂಧಿಸಿದೆ.**
2. 66 ಶಾಲೆಗಳಲ್ಲಿ ಪೂರಕ ಪೌಷ್ಟಿಕ ಆಹಾರ ವಿತರಿಸದೆ ಇರುವುದಕ್ಕೆ ಕಾರಣಗಳು,

   ಈ ಶಾಲೆಗಳಲ್ಲಿ ಇಲಾಖೆ ಸುತ್ತೋಲೆಯಂತೆ ಕಾರ್ಯಕ್ರಮ ಅನುಷ್ಠಾನಗೊಳಿಸದೆ ಕರ್ತವ್ಯ ಲೋಪವೆಸಗಿರುವ ಮತ್ತು ಮೇಲ್ವಿಚಾರಣೆಯಲ್ಲಿ ಬೇಜವಾಬ್ದಾರಿಯನ್ನು ತೋರಿರುವ ಒಟ್ಟು 50 ತಾಲ್ಲೂಕುಗಳ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಮತ್ತು 48 ಸಹಾಯಕ ನಿರ್ದೇಶಕರಿಗೆ ಕಾರಣ ಕೇಳಿ ನೋಟೀಸು ಜಾರಿಗೊಳಿಸಲಾಗಿದೆ ಹಾಗೂ ವಿವರಣೆ ಪಡೆಯಲಾಗುತ್ತಿದೆ. ಇಲಾಖೆಯ ಅಧಿಕಾರಿಗಳು ಸದರಿ ಶಾಲೆಗಳಿಗೆ ಈಗಾಗಲೇ ಭೇಟಿ ನೀಡಿ ಪರಿಶೀಲಿಸಿದ್ದು, ಬಿಸಿಯೂಟದೊಂದಿಗೆ ಇಲಾಖಾ ಮಾರ್ಗ ಸೂಚಿಯಂತೆ ಪೂರಕ ಪೌಷ್ಟಿಕ ಆಹಾರವನ್ನು ಶಾಲಾ ಮಕ್ಕಳಿಗೆ ನಿಗದಿತ ಪ್ರಮಾಣದಲ್ಲಿ ವಿತರಿಸುವ ಕ್ರಮವಹಿಸಿರುತ್ತಾರೆ.

.....2

3. ಶಾಲಾ ಮಕ್ಕಳಿಂದ ಒಪ್ಪಿಗೆ ಪತ್ರವನ್ನು ಅವರ ಪೋಷಕರಿಂದ ಪಡೆಯುವ ಕ್ರಮಕ್ಕಾಗಿ ಸೂಚಿಸಲಾಗಿದೆ. ಮೊಟ್ಟೆ ಸೇವನೆಗೆ ಒಪ್ಪಿಗೆ ನೀಡಿರುವ ಮಕ್ಕಳಿಗೆ ಮೊಟ್ಟೆಯನ್ನು ಮೊದಲ ಆದ್ಯತೆಯಾಗಿ ವಿತರಿಸುವುದು. ಮೊಟ್ಟೆಯನ್ನು ಸ್ವಿಕರಿಸದೇ ಇರುವ ಮಕ್ಕಳಿಗೆ ಎರಡನೆಯ ಆದ್ಯತೆಯಾಗಿ ಬಾಳೆಹಣ್ಣು ಹಾಗೂ ಕೊನೆಯ ಆಯ್ಕೆಯಾಗಿ ಶೇಂಗಾ ಚಿಕ್ಕಿಯನ್ನು ಮಕ್ಕಳಿಗೆ ವಿತರಿಸುವಂತೆ ಸೂಚನೆ ನೀಡಲಾಗಿದೆ. ಈ ಕಾರ್ಯಕ್ರಮವು ಮಕ್ಕಳ ಅಪೌಷ್ಠಿಕ ನಿವಾರಿಸಲು ಮೊಟ್ಟೆಯನ್ನು ಪ್ರಧಾನವಾಗಿ ಕೊಡುವ ಕಾರ್ಯಕ್ರಮವಾಗಿರುತ್ತದೆ.

**ಇಪಿ 117 ಎಂಎಂಎಸ್ 2024**

**(ಎಸ್.ಮಧು ಬಂಗಾರಪ್ಪ)**
**ಶಾಲಾ ಶಿಕ್ಷಣ ಮತ್ತು ಸಾಕ್ಷರತಾ**
**ಸಚಿವರು**

ಕರ್ನಾಟಕ ಸರ್ಕಾರ

ಆಯುಕ್ತರ ಕಛೇರಿ, ಶಾಲಾ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಕೆ ಆರ್ ವೃತ್ತ, ಬೆಂಗಳೂರು – 01

ಸಂಖ್ಯೆ:ಎಂ01/ಪಿ ಎಂ ಪೋಷಣ್/APF-SNF/E-1509746/2024-25 ದಿನಾಂಕ:30.10.2024

## ಜ್ಞಾಪನ

ವಿಷಯ: 2024-25 ನೇ ಸಾಲಿನಲ್ಲಿ ಪಿ ಎಂ ಪೋಷಣ್ ಯೋಜನೆಯಡಿ ರಾಜ್ಯ ಸರ್ಕಾರದ ಮತ್ತು ಅಜೀಂ ಪ್ರೇಮ್ ಜಿ ಫೌಂಡೇಶನ್ ರವರ ಆರ್ಥಿಕ ಅನುದಾನದಡಿ ಸರ್ಕಾರಿ ಮತ್ತು ಅನುದಾನಿತ ಶಾಲೆಗಳಲ್ಲಿ ವಿದ್ಯಾರ್ಥಿಗಳಿಗೆ ವಾರದಲ್ಲಿ 06 ದಿನಗಳಂದು ಪೂರಕ ಪೌಷ್ಠಿಕ ಆಹಾರವಾಗಿ ಮೊಟ್ಟೆಯನ್ನು ವಿತರಿಸುತ್ತಿರುವ ಬಗ್ಗೆ.

ಉಲ್ಲೇಖ: 1.ಈ ಕಛೇರಿಯ ಸುತ್ತೋಲೆ ಪತ್ರ ಸಂಖ್ಯೆ:ಎಂ01/ಪಿ ಎಂ ಪೋಷಣ್/APF-SNF/E-1509746/2024-25, ದಿನಾಂಕ 12.09.2024 ಮತ್ತು ದಿನಾಂಕ 20.09.2024.

ಮೇಲ್ಕಂಡ ವಿಷಯ ಹಾಗೂ ಉಲ್ಲೇಖಗಳಿಗೆ ಸಂಬಂಧಿಸಿದಂತೆ, ರಾಜ್ಯದಲ್ಲಿ ವಾರದ ಎಲ್ಲಾ 06 ದಿನಗಳಿಗೆ ಪ್ರತಿ ವಿದ್ಯಾರ್ಥಿಗೆ ಮೊಟ್ಟೆ ವಿತರಣೆಗೆ ಈಗಾಗಲೇ ದಿನಾಂಕ 25-09-2024 ರಂದು ಸರ್ಕಾರವು ಅಧಿಕೃತ ಚಾಲನೆಯನ್ನೂ ನೀಡಿರುತ್ತದೆ. ಈ ಕಾರ್ಯಕ್ರಮವು ರಾಜ್ಯ ಸರ್ಕಾರದ ಒಂದು ಪ್ರತಿಷ್ಠಿತ ಕಾರ್ಯಕ್ರಮವಾಗಿದ್ದು ಶೇಕಡ 100 ರ ಮಕ್ಕಳ ಅಭಿವೃದ್ಧಿ ಉದ್ದೇಶಿತವಾಗಿರುತ್ತದೆ. ರಾಜ್ಯದ ಮಕ್ಕಳಲ್ಲಿರುವ ಅಪೌಷ್ಠಿಕತೆ, ರಕ್ತಹೀನತೆ ಮತ್ತು ಬಹುಪೋಷಕಾಂಶಗಳ ನ್ಯೂನತೆಯನ್ನು ನಿವಾರಿಸಲು, ಮಕ್ಕಳ ದೈಹಿಕ ಆರೋಗ್ಯಯುತ ಬೆಳವಣಿಗೆಯನ್ನು ಉತ್ತೇಜಿಸಲು ಸದರಿ ಕಾರ್ಯಕ್ರಮವನ್ನು ಶಾಲೆಗಳಲ್ಲಿ ಅನುಷ್ಠಾನಗೊಳಿಸಿರುತ್ತದೆ. ಇದರ ಪೂರ್ಣ ಪ್ರಮಾಣದ ಪ್ರಯೋಜನವನ್ನು ಶಾಲಾ ಮಕ್ಕಳು ಪಡೆಯುವಂತಾಗಬೇಕೆಂಬುದು ರಾಜ್ಯ ಸರ್ಕಾರದ ಆಶಯವಾಗಿರುತ್ತದೆ. ಇದಕ್ಕೆ ಬೆಂಬಲವಾಗಿ ರಾಜ್ಯದ ಎಲ್ಲಾ ಜಿಲ್ಲಾ ಮತ್ತು ತಾಲ್ಲೂಕಿನ ಅನುಷ್ಠಾನಾಧಿಕಾರಿಗಳು, ಶಾಲಾ ಮುಖ್ಯಸ್ಥರು ಸದರಿ ಕಾರ್ಯಕ್ರಮದ ಅನುಷ್ಠಾನದ ಉದ್ದೇಶವನ್ನು ಸಮರ್ಪಕವಾಗಿ ಮನವರಿಕೆಮಾಡಿಕೊಂಡು ಯಾವುದೇ ಆರೋಪಗಳಿಗೆ ಅವಕಾಶ ಮಾಡಿಕೊಡದೆ ಅತ್ಯಂತ ಕಾಳಜಿಯಿಂದ ಯಶಸ್ವಿಯಾಗಿ ಗುರಿ ಸಾಧಿಸಲು ಅಗತ್ಯ ಕ್ರಮಗಳನ್ನು ಕೈಗೊಳ್ಳುವಂತೆ ಈ ಮೂಲಕ ಸೂಚಿಸಿದೆ.

ರಾಜ್ಯದ ಸರ್ಕಾರಿ ಮತ್ತು ಅನುದಾನಿತ ಶಾಲೆಗಳಲ್ಲಿ ಸದರಿ ಕಾರ್ಯಕ್ರಮದ ಅನುಷ್ಠಾನದ ಕ್ರಮಗಳ ಬಗ್ಗೆ ಅಜೀಂ ಪ್ರೇಮಜಿ ಫೌಂಡೇಶನ್ ಫಾರ್ ಡೆವಲಪಮೆಂಟ್ (APF) ಸಂಸ್ಥೆಯ ಪರಿಶೀಲನಾ ತಂಡವು ಶಾಲಾ ಶಿಕ್ಷಣ ಇಲಾಖೆಯ ಅನುಮತಿಯೊಂದಿಗೆ ರಾಜ್ಯದಲ್ಲಿ Random ಆಗಿ 04 ವಿಭಾಗಗಳು ಸೇರಿದಂತೆ ಒಟ್ಟು 357 ಶಾಲೆಗಳಿಗೆ ಭೇಟಿ ನೀಡಿ **Pilot Program Evaluation** ಮೌಲ್ಯಮಾಪನ ಅಧ್ಯಯನ ಕಾರ್ಯವನ್ನು ಕೈಗೊಂಡಿರುತ್ತಾರೆ. ದಿನಾಂಕ 15.10.2024 ರಂದು ಸರ್ಕಾರದ ಮಾನ್ಯ ಪ್ರಧಾನ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ನಡೆದ ಪ್ರಗತಿ ಪರಿಶೀಲನಾ ಸಭೆಯಲ್ಲಿ ತಮ್ಮ ಮೌಲ್ಯಮಾಪನ ಅಧ್ಯಯನದ ವರದಿಯನ್ನು ಮಂಡಿಸಿರುತ್ತಾರೆ. ಸಂಸ್ಥೆಯ ವರದಿಯಂತೆ ಈ ಕೆಳಕಂಡ ಅಂಶಗಳನ್ನು ಇಲಾಖೆಯು ಗಂಭೀರವಾಗಿ ಪರಿಗಣಿಸಿರುತ್ತದೆ.

1. ಅಧ್ಯಯನ ಕೈಗೊಂಡ 357 ಶಾಲೆಗಳ ಪೈಕಿ 66 ಶಾಲೆಗಳಲ್ಲಿ ಪೂರಕ ಪೌಷ್ಠಿಕ ಆಹಾರವಾಗಿ ವಿತರಿಸಬೇಕಾಗಿದ್ದ ಮೊಟ್ಟೆಯನ್ನೇ ಇದುವರೆವಿಗೂ ವಿತರಿಸಿರುವುದಿಲ್ಲ. ಈ 66 ಶಾಲೆಗಳ ಪಟ್ಟಿಯನ್ನು ಪತ್ರದೊಂದಿಗೆ ಮಾಹಿತಿಗಾಗಿ ಅನುಬಂಧಿಸಿದೆ.
2. ಈ ಶಾಲೆಗಳಲ್ಲಿ ಶೇಕಡ 30 ರಷ್ಟು ವಿದ್ಯಾರ್ಥಿಗಳು ಮೊಟ್ಟೆ ಸೇವಿಸಲು ತಮ್ಮ ಒಪ್ಪಿಗೆಯನ್ನು ನೀಡಿದ್ದರೂ ಸಹ ಈ ವಿದ್ಯಾರ್ಥಿಗಳಿಗೆ ಮೊಟ್ಟೆ ವಿತರಣೆ ಮಾಡಿರುವುದಿಲ್ಲ. ಬದಲಾಗಿ ಈ ವಿದ್ಯಾರ್ಥಿಗಳಿಗೆ ಶೇಂಗಾ ಚಿಕ್ಕಿ / ಬಾಳೆ ಹಣ್ಣನ್ನು ವಿತರಿಸುತ್ತಿದ್ದಾರೆ.

ಇಲಾಖೆಯು ಈ ನ್ಯೂನತೆಗಳನ್ನು ಗಂಭೀರವಾಗಿ ಪರಿಗಣಿಸಿ ಈ ಕೆಳಕಂಡ ಕ್ರಮಗಳನ್ನು ಕೈಗೊಂಡು ಕಾರ್ಯಕ್ರಮದ ಅನುಷ್ಠಾನಾವನ್ನು ಉತ್ತಮಗೊಳಿಸಿದೆ.

**ಶಾಲಾ ಶಿಕ್ಷಣ ಇಲಾಖೆ ತೆಗೆದುಕೊಂಡ ಕ್ರಮಗಳು.**

1. ದಿನಾಂಕ 30.10.2024 ರಂದು ಮಾನ್ಯ ಆಯುಕ್ತರು ಶಾಲಾ ಶಿಕ್ಷಣ ಇಲಾಖೆ ಬೆಂಗಳೂರು ಇವರಿಂದ ಜ್ಞಾಪನ ಪತ್ರ ಜಾರಿಗೊಳಿಸಿದ್ದು ಶೇಂಗ ಚಿಕ್ಕಿಯ ಅಳತೆ ಪ್ರಮಾಣ ಸ್ಪಷ್ಟವಾಗಿ ನಿಗದಿಪಡಿಸಿದೆ. ಶೇಂಗ ಚಿಕ್ಕಿಯ ಉದ್ದ 2 ಇಂಚು ಅಗಲ 2 ಇಂಚು ಮತ್ತು ದಪ್ಪ ½ ಇಂಚು ಒಟ್ಟು ತೂಕ 35 ರಿಂದ 60 ಗ್ರಾಂ ಇರಬೇಕು ಎಂಬುದಾಗಿ ಸೂಚಿಸಿದೆ. ಪ್ರತಿಯನ್ನು ಮಾಹಿತಿಗಾಗಿ ಲಗತ್ತಿಸಿದೆ.
2. 66 ಶಾಲೆಗಳಲ್ಲಿ ಪೂರಕ ಪೌಷ್ಠಿಕ ಆಹಾರ ವಿತರಿಸದೆ ಇರುವುದಕ್ಕೆ ಕಾರಣಗಳು, ಈ ಶಾಲೆಗಳಲ್ಲಿ ಇಲಾಖೆ ಸುತ್ತೋಲೆಯಂತೆ ಅನುಷ್ಠಾನಗೊಳಿಸುವ ಕ್ರಮದಲ್ಲಿ ಅನುಷ್ಠಾನಗೊಳಿಸದೆ ಕರ್ತವ್ಯಲೋಪವೆಸೆಗಿರುವ ಮತ್ತು ಮೇಲ್ವಿಚಾರಣೆಯಲ್ಲಿ ಬೇಜವಾಬ್ದಾರಿಯನ್ನು ತೋರಿರುವ ಒಟ್ಟು 50 ತಾಲ್ಲೂಕುಗಳ ಒಟ್ಟು 66 ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಮತ್ತು 47 ಸಹಾಯಕ ನಿರ್ದೇಶಕರಿಗೆ ಕಾರಣ ಕೇಳಿ ನೋಟೀಸು ಜಾರಿಗೊಳಿಸಲಾಗಿದೆ ಹಾಗೂ ಉತ್ತರ ಪಡೆಯಲಾಗುತ್ತಿದೆ. ಈ ಅಧಿಕಾರಿಗಳು ಸದರಿ ಶಾಲೆಗಳಿಗೆ ಈಗಾಗಲೇ ಬೇಟಿ ನೀಡಿದ್ದು ಬಿಸಿಯೂಟದೊಂದಿಗೆ ಇಲಾಖಾ ಮಾರ್ಗ ಸೂಚಿಯಂತೆ ಪೂರಕ ಪೌಷ್ಠಿಕ ಆಹಾರವನ್ನು ಶಾಲಾ ಮಕ್ಕಳಿಗೆ ನಿಗಧಿತ ಪ್ರಮಾಣದಲ್ಲಿ ವಿತರಿಸುವ ಕ್ರಮವಹಿಸಿರುತ್ತಾರೆ.
3. ಶಾಲಾ ಮಕ್ಕಳಿಂದ ಒಪ್ಪಿಗೆ ಪತ್ರವನ್ನು ಅವರ ಪೋಷಕರಿಂದ ಪಡೆಯುವ ಕ್ರಮಕ್ಕಾಗಿ ಸೂಚಿಸಲಾಗಿದೆ. ಮೊಟ್ಟೆ ಸೇವನೆಗೆ ಒಪ್ಪಿಗೆ ನೀಡಿರುವ ಮಕ್ಕಳಿಗೆ ಮೊಟ್ಟೆಯನ್ನು ಮೊದಲ ಆಧ್ಯತೆಯಾಗಿ ವಿತರಿಸುವುದು. ಮೊಟ್ಟೆಯನ್ನು ಸ್ವಿಕರಿಸದೇ ಇರುವ ಮಕ್ಕಳಿಗೆ ಎರಡನೆಯ ಆಧ್ಯತೆಯಾಗಿ ಬಾಳೆಹಣ್ಣು ಇಲ್ಲವೆ ಕೊನೆಯ ಆಯ್ಕೆಯಾಗಿ ಶೇಂಗ ಚಿಕ್ಕಿಯನ್ನು ಮಕ್ಕಳಿಗೆ ವಿತರಿಸುವಂತೆ ಸೂಚಿಸಿ ಪತ್ರ ನೀಡಲಾಗಿದೆ. ಈ ಕಾರ್ಯಕ್ರಮವು ಮಕ್ಕಳ ಅಪೌಷ್ಠಿಕತೆ ನಿವಾರಿಸಲು ಮೊಟ್ಟೆಯನ್ನು ಪ್ರಧಾನವಾಗಿ ಕೊಡುವ ಕಾರ್ಯಕ್ರಮವಾಗಿರುತ್ತದೆ.

For ನಿರ್ದೇಶಕರು, 13/10/2024
ಪಿಎಂ ಪೋಷಣ್,
ಶಾಲಾ ಶಿಕ್ಷಣ ಇಲಾಖೆ,
ಬೆಂಗಳೂರು